‘ಇಲ್ಲದಿದ್ದರೆ...’

‘ನನ್ನ ಪ್ರತಿಜ್ಞೆ ಮರೆತು ಬಿಡುತ್ತಿದ್ದೆ.’

‘ಎಂತಹ ಪ್ರತಿಜ್ಞೆ?’

ಮದಂತ ತಣ್ಣನೆಯ ಸ್ವರದಲ್ಲಿ ‘ಬೇರೆಯವರ ಮೇಲೆ ಮಾಂತ್ರಿಕ ಪ್ರಯೋಗ ಮಾಡಲಾರೆ ಎಂಬ ಪ್ರತಿಜ್ಞೆಯನ್ನು ಮರೆಯುತ್ತಿದ್ದೆ.’

ಕೋಪದಿಂದ ಬುಸುಗುಡುತ್ತಾ ‘ಅಂದರೆ... ಅಂದರೆ ನನ್ನ ಮೇಲೆ ನೀನು ಪ್ರಯೋಗ ಮಾಡುತ್ತೀಯ. ನಾನ್ಯಾರು ಅಂತ ಗೊತ್ತಿದೆ ತಾನೆ?’ ‘ನನಗೆ ವಿದ್ಯೆ ಕಲಿಸಿರುವ ಮಾಂತ್ರಿಕ ಗುರು. ಆದರೆ ಈಗ ಹಲ್ಲು ಕಿತ್ತಿರುವ ಹಾವು!’

ಅಬ್ಬರಿಸಿದನು ರುದ್ರನಾಗ.

ಮದಂತ ‘ಗುರುಗಳೆ... ಮಲ್ಲಿಗೆಗೆ ಸೂಚನೆ ಕೊಡಿ. ಅವಳು ತನ್ನ ತಾಯಿಯ ಮೇಲೆ ನಾಳೆ ರಾತ್ರಿ ಪ್ರಯೋಗ ಮಾಡಬಾರದು. ನೀವು ಈ ಸೇಡಿನ ಕತೆಯನ್ನು ಮುಕ್ತಾಯ ಮಾಡಿ. ನಿಮ್ಮ ತಂಗಿಯ ಜೊತೆ ಮಲ್ಲಿಗೆಯನ್ನು ಕಳಿಸಿಕೊಡಿ. ಇನ್ನು ಮುಂದಾದರೂ ಆ ತಾಯಿಗೆ ಮಗಳಾಗಿರಲು.’ ರುದ್ರನಾಗ ಕೋಪದಿಂದ ಮುಷ್ಟಿಯನ್ನು ಬಿಗಿಯುತ್ತಾ ‘ಒಂದು ವೇಳೆ ನಾನು ಒಪ್ಪದಿದ್ದರೆ...’

ಮದಂತ ‘ಆ ತಾಯಿಯ ರಕ್ಷಣೆಗೆ ನಾನು ನಿಲ್ಲಬೇಕಾಗುತ್ತದೆ.’ ರುದ್ರನಾಗ ವ್ಯಂಗ್ಯವಾಗಿ ‘ಯಾರ ಮೇಲೂ ಸಹ ನೀನು ಮಾಂತ್ರಿಕ ಪ್ರಯೋಗ ಮಾಡಲಾರೆ ಅಂದಿದ್ದೆ. ಈಗ ಅದನ್ನು ಮರೆತಿದ್ದೀಯಲ್ಲ.’

ಮದಂತ ‘ಇದರಲ್ಲಿ ನನ್ನ ಸ್ವಾರ್ಥ ಮತ್ತು ಸೇಡು ಇಲ್ಲ. ಸಾಯುವ ಕೊನೆಯ ಹಂತದಲ್ಲಿ ಕಾವ್ಯ ನನ್ನ ಕೈ ಹಿಡಿದುಕೊಂಡು ತನ್ನ ತಾಯಿಯನ್ನು ಕಾಪಾಡಿ ಎಂದು ಕೇಳಿಕೊಂಡಳು. ನಾನು ಆ ಕ್ಷಣವೇ ನಿರ್ಧಾರ ಮಾಡಿದೆ.’

‘ಏನದು ನಿನ್ನ ನಿರ್ಧಾರ?’

ಮದಂತ ‘ಮಾಂತ್ರಿಕ ಲೋಕದ ಯಾವ ಮಹಾನ್ ಕ್ರೂರ ಕ್ಷುದ್ರಶಕ್ತಿಯೇ ಎದುರಾದರೂ ಸಹ ಆ ತಾಯಿ ಅರುಂಧತಿಯನ್ನು ಕಾಪಾಡುತ್ತೇನೆ ಎಂದು.’

ರುದ್ರನಾಗ ಕೋಪದಿಂದ ‘ಅಂದರೆ, ನನ್ನ ಪ್ರಯತ್ನಕ್ಕೆ ಎದುರಾಗಿ ನಿಲ್ಲುತ್ತೀಯ.’

‘ಬೇರೆ ದಾರಿಯೇ ಇಲ್ಲ’

ರುದ್ರನಾಗ ‘ಈ ಪ್ರಯತ್ನದಲ್ಲಿ ನಿನಗೂ ಸಹ ಅಪಾಯ ಉಂಟಾಗಬಹುದು.’

‘ಅದನ್ನೇ ನಾನು ಹೇಳುತ್ತೇನೆ. ನೀವು ಮತ್ತು ಮಲ್ಲಿಗೆ ಎಚ್ಚರಿಕೆಯಿಂದ ಇರುವುದು ಒಳ್ಳೆಯದು.’

ರುದ್ರನಾಗ ಕಾಲನ್ನು ನೆಲಕ್ಕೆ ಅಪ್ಪಳಿಸಿ ಅಲ್ಲಿಂದ ಬಿರಬಿರನೆ ನಡೆದ.

ಮದಂತ ಮಂಡಿಯೂರಿ ನೆಲದ ಮೇಲೆ ಕುಳಿತುಕೊಂಡು ರುದ್ರನಾಗ ಹೆಜ್ಜೆ ಊರಿದ್ದ ಮಣ್ಣನ್ನು ಸಂಗ್ರಹಿಸಿದ.

ಮದಂತ ‘ಗುರುಗಳೆ... ನಿಮ್ಮನ್ನು ಸಾಯಿಸುವ ಉದ್ದೇಶ ನನಗಿಲ್ಲ. ಆದರೆ ನಿಮ್ಮ ಕ್ರಿಯಾಶೀಲತೆಯನ್ನು ನಾನು ತಡೆಯಲೇಬೇಕು. ಇದು ಅನಿವಾರ್ಯ! ಮೊದಲು ನಾನು ಪ್ರಯೋಗ ಮಾಡುವುದು ನಿಮ್ಮ ಮೇಲೆ’.

* * *

## ಕಾವ್ಯ ಬಲಿಪಶು

ಜನರು ಗುಂಪುಗೂಡುತ್ತಿದ್ದಾರೆ. ಅವಳು ರಕ್ತವಾಂತಿ ಮಾಡಿಕೊಂಡಿದ್ದರಿಂದ ಕಾರಿನ ಸೀಟಿನ ಮೇಲೆ ಮತ್ತು ದೇಹದ ಇನ್ನಿತರ ಕಡೆ ರಕ್ತದ ಕಲೆಗಳು ಕಂಡುಬರುತ್ತಿವೆ. ಹೆಣದ ಕಣ್ಣುಗಳು ತೆರೆದುಕೊಂಡಿವೆ. ರಕ್ತದ ಲೇಪನದಿಂದಾಗಿ ಮುಖ ಭಯಂಕರವಾಗಿ ಕಂಡುಬರುತ್ತಿದೆ. ಅರುಂಧತಿ ಮಗಳ ಹೆಣವನ್ನು ತಬ್ಬಿಕೊಂಡು ಅಳುತ್ತಿದ್ದಾಳೆ. ಸುರೇಂದ್ರ ಪೆಚ್ಚಾಗಿ ನಿಂತಿದ್ದಾನೆ.

ಕಾನೂನಿನ ಪ್ರಕಾರ ಅವಳು ಅವನ ಹೆಂಡತಿ. ಆದರೆ ಇದು ಮನೆಯವರಿಗೆ ತಿಳಿದಿರಲಿಲ್ಲ. ಸ್ಮಶಾನಕ್ಕೆ ಹೋಗಿದ್ದ ಮದಂತ ಪುನಃ ಅಲ್ಲಿಗೆ ಬಂದ. ಅದೇ ಸಮಯಕ್ಕೆ ಪೊಲೀಸರು ಸಹ ಅಲ್ಲಿಗೆ ಬಂದರು. ರಕ್ತ ಕಾರಿಕೊಂಡು ಬಿದ್ದಿರುವ ಹೆಣವನ್ನು ಕಂಡು ಕೂಡಲೇ ಅವರಿಗೆ ಗೊತ್ತಾಗಿ ಹೋಯಿತು. ಇದು ಕ್ಷುದ್ರಶಕ್ತಿಯ ಕ್ರೂರತನದ ಕೆಲಸ! ಇದನ್ನು ರುದ್ರನಾಗ ಮಾಡಿಸಿದ್ದಾನೆ. ಅಂದ ಮೇಲೆ ಪೊಲೀಸರು ತೀವ್ರ ರೀತಿಯ ಆಸಕ್ತಿಯನ್ನು ಇದರಲ್ಲಿ ತೋರಿಸಲಿಲ್ಲ. ಏನೋ ಮೇಲಾಧಿಕಾರಿಗಳನ್ನು ಮೆಚ್ಚಿಸಲು ತನಿಖೆಯ ಶಾಸ್ತ್ರ ಮಾಡಿದರು. ಮದಂತ ಈಗ ಹೆಣದ ಮುಖವನ್ನು ನೋಡಿದ. ಭಯಾಶ್ಚರ್ಯ ಉಂಟಾಯಿತು. ಮತ್ತೊಂದು ಸಲ ನೋಡಿದ. ಅರೆ... ಇದೇನು ಈ ರೀತಿ? ಕ್ಷುದ್ರಶಕ್ತಿಗಳನ್ನು ಪ್ರಯೋಗಿಸಿದರೆ ರಕ್ತ ಕಾರಿಕೊಂಡು ಸಾಯುತ್ತಾರೆ! ಕಾವ್ಯ ತುಂಬಾ ರಕ್ತವಾಂತಿ ಮಾಡಿಕೊಂಡಿದ್ದಾಳೆ. ನಿಜ. ಆದರೆ ಮುಖ ಯಾಕೆ ನೀಲಿಯಾಗಿದೆ?

* * *

ರುದ್ರನಾಗ ಮನೆಗೆ ಹಿಂತಿರುಗಿದ ಕೂಡಲೇ ರಾತ್ರಿಗೆ ಬೇಕಾಗುವ ಪೂಜಾ ವಸ್ತುಗಳನ್ನು ಸಿದ್ಧಪಡಿಸಿದ.

ಕೋಳಿ, ಕುರಿ... ಹಂದಿಯ ಕೂದಲು... ಕಾಗೆಯ ಮಲ... ಮೂತ್ರ... ಕೋಳಿಮೊಟ್ಟೆ... ಬೆಳ್ಳುಳ್ಳಿ, ನೇಂದ್ರ ಬಳ್ಳಿಯ ತುಂಡು... ಸೇಂದಿ!

ಆಗ ಸಂಜೆಯಾಗಿದೆ. ಮಲ್ಲಿಗೆ ರಾತ್ರಿಗೆ ಅಡುಗೆ ಮಾಡುತ್ತಿದ್ದಾಳೆ. ರುದ್ರನಾಗ ರಾತ್ರಿಯ ಹೊತ್ತು ಏಳೂವರೆಯ ಹೊತ್ತಿಗೆ ಊಟ ಮಾಡಿ ಮುಗಿಸುತ್ತಿದ್ದ. ಇದು ನಿತ್ಯದ ಕ್ರಮ! ಮಲ್ಲಿಗೆ ರಾತ್ರಿ ಹತ್ತು ಗಂಟೆಯ ನಂತರ ಊಟ ಮಾಡಿ ಕೆಲಸ ಇದ್ದರೆ ಸ್ಮಶಾನಕ್ಕೆ ಹೋಗುತ್ತಿದ್ದಳು. ಇಲ್ಲದಿದ್ದರೆ ನಿದ್ದೆ ಮಾಡುತ್ತಿದ್ದಳು.

ರುದ್ರನಾಗ ಮುಖದ ತುಂಬಾ ಪೊದೆಯ ರೀತಿಯ ಬೆಳೆದುಕೊಂಡಿದ್ದ ಬಿಳಿಯ ಗಡ್ಡವನ್ನು ಸವರುತ್ತಾ ‘ಮಲ್ಲಿಗೆ... ಇದು ನಿನಗೆ ಕೊನೆಯ ಪ್ರಯೋಗ. ಇನ್ನು ಮುಂದೆ ನೀನು ಸ್ಮಶಾನಕ್ಕೆ ಹೋಗುವ ಅಗತ್ಯ ಇಲ್ಲ.’

ಮಲ್ಲಿಗೆಯಿಂದ ಪ್ರತಿಕ್ರಿಯೆ ಇಲ್ಲ. ಯಾವುದಕ್ಕೂ ಯಾವತ್ತೂ ಸ್ಪಂದಿಸಲಾರದ ಹೆಬ್ಬಂಡೆಯಂತೆ ಅವಳು ಅಲ್ಲಾಡದೆ ಕುಳಿತಿದ್ದಾಳೆ.

ರುದ್ರನಾಗ ‘ಮಲ್ಲಿಗೆ... ನಿನಗೆ ವಿದ್ಯೆ ಕಲಿಸಿರುವ ಮದಂತ ನಿನಗೆ ಎದುರಾಗಿ ನಿಲ್ಲುತ್ತಾನೆ.’

ಬೆಚ್ಚಿ ಬೀಳಲಿಲ್ಲ; ಭಯಪಡಲಿಲ್ಲ. ಈಗಲೂ ಸಹ ಅವಳು ನಿರ್ಲಿಪ್ತಳಾಗಿದ್ದಾಳೆ.

ರುದ್ರನಾಗ ಕೋಪದಿಂದ ‘ನಾನು ಹೇಳುತ್ತಿರುವುದು ಕೇಳಿಸುತ್ತಿದೆ ತಾನೇ?’

‘ಕೇಳಿಸುತ್ತಿದೆ, ಹೇಳಿ’

ರುದ್ರನಾಗ ‘ಎಂತಹ ಪರಿಸ್ಥಿತಿಯಲ್ಲಿಯೂ ಸಹ ನೀನು ಸೋಲಬಾರದು. ನೀನು... ನೀನು... ಅತ್ಯಂತ ಕ್ರೂರ ಪ್ರಯೋಗವಾದ ದ್ವಿರಕಹಸ್ತ ಚಂಡಿಕೆ ಪ್ರಯೋಗ ಮಾಡು. ಇದನ್ನು ಒಂದು ಸಲ ಪ್ರಯೋಗಿಸಿದರೆ ಎಂತಹ ಮಾಂತ್ರಿಕನೂ ಸಹ ತಡೆ ಒಡ್ಡಲಾರ. ಈ ಪ್ರಯೋಗ ಸಾಧಕನಿಗೆ ಸೋಲು ತರುವುದಿಲ್ಲ. ಎದುರಾಳಿಯ ಸಾವು ನಿಶ್ಚಿತ’.

ಈಗ ಸ್ವಲ್ಪ ಅಮರಿಬಿಟ್ಟಳು. ದ್ವಿರಕಹಸ್ತ ಚಂಡಿಕ ಪ್ರಯೋಗದಿಂದ ಯಶಸ್ಸು ಸಿಗುತ್ತದೆ ನಿಜ. ಆದರೆ ನಲವತ್ತೆಂಟು ದಂಡಗಳ ಮಂತ್ರವನ್ನು ಕೈಕರಣದೊಂದಿಗೆ ಹೇಳಬೇಕು. ಪ್ರತಿ ದಂಡದಲ್ಲಿಯೂ ಸಹ ನಲವತ್ತೆಂಟು ಸಾಲುಗಳ ಮಂತ್ರಗಳಿರುತ್ತವೆ. ಮಧ್ಯೆ ನಿಲ್ಲಿಸದೆ ಸ್ವರ ಲೋಪವಾಗದ ರೀತಿಯಲ್ಲಿ ಹೇಳಬೇಕು. ಮಧ್ಯೆ ಮಂತ ತಪ್ಪಿದರೆ, ಸ್ವರದಲ್ಲಿ ವ್ಯತ್ಯಾಸವಾದರೆ ಮಾಂತ್ರಿಕ ರಕ್ತ ಕಾರಿಕೊಂಡು ಅಲ್ಲೇ ಸಾಯುತ್ತಾನೆ.

ರುದ್ರನಾಗ...‘ಮಲ್ಲಿಗೆ ದ್ವಿರಕಹಸ್ತ ಚಂಡಿಕ ಪ್ರಯೋಗದ ಮಂತ್ರಗಳು ನೆನಪಿದೆ ತಾನೆ?’

ಮಲ್ಲಿಗೆ ತಲೆಯಾಡಿಸಿದಳು.

ರುದ್ರನಾಗ ‘ಈ ಪ್ರಯೋಗಕ್ಕೆ ಅಗತ್ಯವಾದ ವಸ್ತುಗಳನ್ನು ನಾನು ಈ ಬ್ಯಾಗಿನಲ್ಲಿ ಇರಿಸಿದ್ದೇನೆ. ಊಟ ಮಾಡಿಕೊಂಡು ಹತ್ತು ಗಂಟೆಯ ನಂತರ ಹೊರಡು.’

ಮಲ್ಲಿಗೆ ‘ಆಗಲಿ’

ರುದ್ರನಾಗ ‘ನೀನು ಯಾರೊಡನೆಯೂ ಮಾತಾಡಬಾರದು. ಯಾವ ವಿಷಯಕ್ಕೂ ಸಹ ಮನಸ್ಸು ಕೆಡಿಸಿಕೊಳ್ಳಬಾರದು ತಿಳಿಯಿತೆ?’

ಮಲ್ಲಿಗೆ ತಲೆಯಾಡಿಸಿದಳು.

ರುದ್ರನಾಗ ‘ಮೂರು ರಾತ್ರಿಗಳಿಂದ ನಿನಗೆ ನಿದ್ದೆ ಇಲ್ಲ. ಅಡುಗೆ ಮಾಡಿದ ನಂತರ ನೀನು ಸ್ವಲ್ಪ ಹೊತ್ತು ನಿದ್ದೆ ಮಾಡು ಮಲ್ಲಿಗೆ.’

‘ಇಲ್ಲ... ನನಗೆ ನಿದ್ದೆ ಬರೋಲ್ಲ’

‘ಅಡುಗೆ ಸಿದ್ಧವಾಗಿದೆಯೇ?’

‘ಆಗಿದೆ’

‘ಸಾರಾಯಿ ಇದೆಯೆ?’

‘ಇಲ್ಲ ಮುಗಿದಿದೆ’

ರುದ್ರನಾಗ ರೇಗುತ್ತಾ ‘ಅದನ್ನು ತರಬೇಕು ಅಂತ ನಿನಗೆ ನೆನಪು ಬರಲಿಲ್ಲವೆ? ಊಟಕ್ಕೆ ರೆಡಿ ಮಾಡು. ನಾನು ಸಾರಾಯಿ ಕುಡಿದು ಬರುತ್ತೇನೆ’ ಎಂದು ಮನೆಯಿಂದ ಹೊರಗೆ ಬಂದ. ಊಟಕ್ಕೆ ನೆಂಚಿಕೊಳ್ಳಲು ಈರುಳ್ಳಿ ಮತ್ತು ಕರಿದಿರುವ ಬಾಳಕದ ಮೆಣಸಿನಕಾಯಿಯ ಇರಲೇಬೇಕು ರುದ್ರನಾಗನಿಗೆ. ಇಲ್ಲದಿದ್ದರೆ ಕೈಗೆ ಏನೇ ಸಿಕ್ಕಿದರೂ ಸಹ ಅದರಿಂದ ಹೊಡೆದು ಬಿಡುತ್ತಿದ್ದ. ಮಲ್ಲಿಗೆ ಇಂತಹ ಹೊಡೆತಗಳನ್ನು ತುಂಬಾ ಸಲ ತಿಂದಿದ್ದರಿಂದ ಅವಳಿಗೆ ಈಗ ಭಯವಾಗಿ ಈರುಳ್ಳಿ ಮತ್ತು ಬಾಳಕದ ಮೆಣಸಿನಕಾಯಿ ತರಲು ಪೇಟೆ ಕಡೆ ಹೊರಟಳು. ಮನೆಯ ಬಾಗಿಲು ತೆರೆಯಿತು. ಮಾನವಾಕೃತಿಯ ನೆರಳು ಚಲಿಸುತ್ತಿದೆ!

(ಸಶೇಷ)